

# ಸೊಳ್ಳೆಗಳು ಸಾರ್ ಸೊಳ್ಳೆಗಳು

**ಯಾವುದೋ ಜನ್ಮದ ಬಾಕಿಯನ್ನು ವಸೂಲಿ ಮಾಡುವಂತೆ ರಕ್ತ ಹೀರುವ ಸೊಳ್ಳೆಗಳು, ಅಪಶ್ರುತಿಯ ಕಚೇರಿಯಿಂದ ನಿದ್ದೆಯನ್ನೂ ಹಾಳುಮಾಡುತ್ತವೆ. ಸೊಳ್ಳೆಗಳ ಬಾಧೆಯಿಂದ ತಪ್ಪಿಸಿಕೊಂಡವರು ಈ ಜಗತ್ತಿನಲ್ಲುಂಟೇ?**

■ **ಕೆ.ವಿ. ರಾಜಲಕ್ಷ್ಮಿ**

‘ಇದೇನು ಈ ಪಾಟಿ ಗುಳ್ಳೆಗಳು?’

‘ಸೊಳ್ಳೆಗಳು ಸಾರ್ ಸೊಳ್ಳೆಗಳು’ ಎಂದು ಗುಳ್ಳೆಗಳನ್ನು ಸವರುತ್ತ ಮುಖ ಹಿಂಡಿಕೊಂಡ.

ಬ್ಯಾಂಕಿನಲ್ಲಿ ನನ್ನ ಸರದಿಗಾಗಿ ಕಾಯುತ್ತಿದ್ದೆ. ಬದಿಗೆ ಕುಳಿತವರ ಸಂಭಾಷಣೆ ಕಿವಿಗೆ ಬೀಳತೊಡಗಿ, ಕಾಯುವ ಬೇಸರ ಕಳೆಯತೊಡಗಿತು.

‘ಪರದೆ, ಗಿರದೆ ಕಟ್ಟಿರಲಿಲ್ವೆ?’

‘ಅಯ್ಯೋ ಸದ್ಯ, ಆ ಛತ್ರದಲ್ಲಿ, ಮಣಭಾರದ ಜಮಖಾನದಲ್ಲಿ ಮಲಗೋಕ್ಕೆ ಒಂದಡಿ ಜಾಗ ಸಿಗೋಕ್ಕೆ ಹರಸಾಹಸ ಪಟ್ಟಾಯ್ತು. ಇನ್ನು ಪರದೆಗೆ ಹೋದ್ರಿ. ರಾತ್ರಿ ಇಡೀ ಗುಂಯ್ ಗುಂಯ್ ರಾಗ, ಪಟ್ ಪಟ್ ಅಂತ ತಾಳ, ಸೊಳ್ಳೇನ ಹೊಡೆಯೋಕ್ಕೆ ಗುರಿಯಿಟ್ಟ ಏಟು ತಲುಪುವಷ್ಟರಲ್ಲಿ ಸೊಳ್ಳೆ ಜಾರಿಕೊಂಡು ನಮ್ಮನ್ನು ನಾವೇ ಹೊಡಕೊಳ್ಳೋ ಹಾಗಾಗ್ತಿತ್ತು’, ಮತ್ತೆ ಕೈ ಸವರಿಕೊಂಡ

‘ಛೇ, ಎಂಥ ಅವಸ್ಥೆ?’ ಲೊಚಗುಟ್ಟಿದ ಕನಿಕರದಿಂದ.

ನನಗೆ ಬರುತ್ತಿದ್ದ ನಗುವನ್ನು ಕಷ್ಟಪಟ್ಟು ತಡೆದುಕೊಂಡೆ. ಸೊಳ್ಳೆಗಳಿಂದ ಬಾಧೆಗೊಳಗಾದವರ ಫಜೀತಿ ನಗು